If we are Sometimes critical of each other, or disappointed, it is because we expect more of members of our family than we do of others. Now and then a member may even feel constrained to go off on his own. Some years ago this happened to Pakistan for example. Yet today we have the Joy of having Pakistan back in the family. This illustrates perfectly the nature of the underlying bond which distinguishes the Commonwealth from all other international organisations.

The commonwelth has other strengths too, one of them is, that it appeals to the young as much as to the old, to peoples and nations at all phases of political, economic cultural and social development to reformers, and lovers of tradition alike.

Another strength of the commonwealth is the multiplicity of strands that blind us together. We should remember that the commonwealth relationship is not limited to the contracts between political leaders. Each and every national organisation and profession seems to have its commonwealth counter part. They give it life and diversity and map out the paths of its future achive ments.

On common wealth day especially we greet each other as members of the biggest and most unusaul family on earth.

† ಶ್ರೀ ಡಿ.ಬಿ. ಚಂದ್ರೇಗೌಡ (ವಿರೋದ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ಈ ಸದನದ ಸಂಪ್ರದಾಯಕ್ಕೆ ಭಿನ್ನವಾಗಿ ಮತ್ತು ಪರಿಸ್ಥಿತಿಯ ದ್ವಂದ್ವದ ಕಾರಣದಿಂದ ನಾವು ಈ ಸಭೆಯನ್ನು ನಡೆಸಿಕೊಂಡು ಬಂದಿದ್ದಂತೆ ರಾಜ್ಯಪಾಲರ ಭಾಷಣ ಆದ ಮೇಲೆ ಮಂದಾನ ನಿರ್ಣಯದ ಮೇಲೆ ಮಾತನಾಡುವ ಬದಲಿಗೆ ಈ ಸಲ ರಾಜ್ಯದ ಆಯವ್ಯಯ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡುತ್ತೇನೆ ಇದು ಒಳ್ಳೆಯ ಸಂಪ್ರಾದಾಯವಲ್ಲವೆಂದು ಗೊತ್ತಿದ್ದರೂ ಪರಿಸ್ಥಿತಿಯ ಶಿಶುವಾಗಿ ತಮ್ಮ ಆದೇಶದಂತೆ ಈ ಚರ್ಚೆಯನ್ನು ಪ್ರಾರಂಭಿಸುತ್ತೇನೆ.

ಶ್ರೀ ಸಿ. ಬೈರೇಗೌಡ —ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್ ಮೇಲೆ ಭಾಷಣ ಪ್ರಾರಂಭ ಮಾಡಿದ್ದಾರೆ. ಈ ಸದನದಲ್ಲಿ ಮೊದಲಿನಿಂದಲೂ ಅಭ್ಯಾಸ ಇದೆ. ಉತ್ತರ ಕೊಡಬೇಕಾದವರು ಮುಖ್ಯಮಂತ್ರಿಗಳು ಅಥವಾ ಅರ್ಥ ಮಂತ್ರಿಗಳು. ಆದರೆ ಇವತ್ತು ಆ ಕಡೆ ಅವರಿಬ್ಬರ ಕುರ್ಚಿಯು ಖಾಲಿ ಇದೆ. ಆದ್ದರಿಂದ ಅವರಿಬ್ಬರೂ ಬರುವವರೆಗೂ ವಿರೋಧ ಪಕ್ಷದ ನಾಯಕರು ಭಾಷಣ ನಿಲ್ಲಿಸಲಿ ಎಂದು ವಿನಂತಿಸಿಕೊಳ್ಳುತ್ತೇನೆ. ಏಕೆಂದರೆ ಸರ್ಕಾರ ನಡೆಸುವವರು ಅವರು ಇದು ಸರ್ಕಾರೀ ಕಾರ್ಯ ಕಲಾಪ. ಇರಬೇಕಾದವರು ಅವರು. ಈ ಸದನದಲ್ಲಿ ಅನೇಕ ವರ್ಷಗಳಿಂದ ನಾನು ಇದ್ದೇನೆ. ಇಂಥ ಪರಿಸ್ಥಿತಿ ಯಾವತ್ತೂ ಉದ್ಭವವಾಗಿರಲಿಲ್ಲ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳೋ ಅಥವಾ ಅರ್ಥಮಂತ್ರಿಗಳೋ ಇರಬೇಕಾಗಿತ್ತು.

ಅಧ್ಯಕ್ಷರು.—ನಾನು ಶ್ರೀಮತಿ ನಾಗರತ್ನಮ್ಮನವರ ಮಾರ್ಗದರ್ಶನವನ್ನು ಅಪೇಕ್ಷಿಸುತ್ತೇನೆ.

ಶ್ರೀಮತಿ ಕೆ ಎಸ್ ನಾಗರತ್ನಮ್ಮ.—ನಾನು ಕುಳಿತು ಆಗ್ಗೆ ಕೆಲಸ ಮಾಡಿದ್ದೇನೆ. ಬರೀ ಖಾಲಿ ಕುರ್ಚಿಗೆ ಎಷ್ಟೋ ಸಲ ಭಾಷಣ ಮಾಡಿದ್ದಿದೆ. ಆವಾಗಲೆಲ್ಲ ಪಾಪ ಭೈರೇಗೌಡರು ಇದ್ದರೂ ಇಲ್ಲಿಲ್ಲವೊ ಗೊತ್ತಿಲ್ಲ. ನಾಲ್ಕೈದು ಜನ ಮಂತ್ರಿಗಳು ಇರುತ್ತಿದ್ದರು. ಈಗ ಮುಖ್ಯಮಂತ್ರಿಗಳು ಅರ್ಥಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ. ಏನಾಯಿತು, ಬೇರೆ ಮಂತ್ರಿಗಳಿಲ್ಲವೇ ? ಆಫೀಸರ್ಸ್ ಇದ್ದಾರೆ. ರಿಪೋರ್ಟರ್ಸ್ ಇದ್ದಾರೆ.

ಶ್ರೀ ಸಿ. ಬೈರೇಗೌಡ.—ಆ ಸ್ಥಾನದಲ್ಲಿ ತಾವು ಕುಳಿತಿರುತ್ತಿದ್ದುದಕ್ಕಿಂತ ನಾನು ಹೆಚ್ಚು ಹೊತ್ತು ಕುಳಿತಿರುತ್ತಿದ್ದೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀಮತಿ ನಾಗರತ್ನಮ್ಮನವರು ಈ ರೀತಿ ಹೇಳುತ್ತಾರೆ ಎಂದು ನಾನು ಅಂದುಕೊಂಡಿರಲಿಲ್ಲ. ಅವರು ಅಧ್ಯಕ್ಷರ ಸ್ಥಾನದಲ್ಲಿ ಸೀಟುಭರ್ತಿ ಕುಳಿತಿರುತ್ತಿದ್ದರು. ಆಗ ಈ ರೀತಿ ನಡೆಯುತ್ತಿತ್ತು, ಅವರೇ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೩ ಮಂತ್ರಿಗಳಿಗೆ ೩ ಮಂತ್ರಿಗಳಿರುತ್ತಿದ್ದರು. ಈಗ ೧೦ರಲ್ಲಿ ೫ ಜನ ಇದ್ದಾರೆ. ಹೋಲಿಕೆ ಮಾಡಿ.

ಶ್ರೀ ವಾಟಾಳ್ ನಾಗರಾಜ .—ಒಂದು ಸಲಹೆಯನ್ನು ಅಧ್ಯಕ್ಷರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಆ ಕಡೆ ೧೭ ಪ್ಲಸ್ ೬ ಜನ ಇಂಡಿಪೆಂಡೆಂಟ್ಸ್ ಸೇರಿಸಿದರೆ ೧೮೫ ಆಗುತ್ತದೆ. ನಮ್ಮಲ್ಲೂ ಶೇಕಡ ವಾರು ತೆಗೆದುಕೊಳ್ಳಿ. ಕಾಂಗ್ರೆಸ್ ಕಡೆಯೆಲ್ಲ ಬರೀ ಖಾಲಿ. ಅದೂ ಮೂರನೆಯ ವಿಭಾಗಕ್ಕೆ ಸಭಾಧ್ಯಕ್ಷರು ಅವರಿಗೆ ತೆರೆಮರೆಯಲ್ಲಿ ತಿಳಿವಳಿಕೆ ನೀಡಿದರೆ ಒಳ್ಳೆಯದು. ಬಹಿರಂಗವಾಗಿ ಹೇಳಿದರೆ ಅರ್ಥವಾಗುತ್ತದೆಯೋ ಇಲ್ಲವೋ ಇದು ಅತ್ಯಂತ ಗಂಭೀರ ಪರಿಸ್ಥಿತಿಯಾಗುತ್ತದೆ.

೧೯೯೦–೯೧ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಶ್ರೀ ಡಿ.ಬಿ. ಚಂದ್ರೇಗೌಡ.—ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಕೇವಲ ಮೂರು ತಿಂಗಳಲ್ಲಿ ಎರಡು ಬಾರಿ ರಾಜ್ಯಪಾಲರ ಭಾಷಣವನ್ನು ನಡೆಸಿದೆ. ಇದು ಮೊದಲನೆಯ ಆಯವ್ಯಯ. ನಾನು ಹಿಂದಿನ ಸಾರಿ ಬಳಸಿದ ಭಾಷೆಯನ್ನೇ ಇಲ್ಲಿ ಬಳಸುವುದಕ್ಕೆ ನನಗೆ ಇಚ್ಛೆ ಇಲ್ಲ ಇದು ಒಂದು ಅಪೂರ್ಣವಾದಂಥ ಮಂತ್ರಿ ಮಂಡಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಕೇಂದ್ರದಲ್ಲಿ ಇದ್ದ ಹಾಗೆ.

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ಚರ್ಚೆ ಮಾಡುತ್ತಿರುವುದು ಈ ಮಂತ್ರಿ ಮಂಡಲದ್ದು, ಕೇಂದ್ರದ್ದಲ್ಲ. ಕೇಂದ್ರದ್ದು ಬಂದಾಗ ಆದನ್ನು ಪ್ರಾತಾಡೋಣ. ಇದು ಒಂದು ಅಪೂರ್ಣವಾದಂಥ ಮಂತ್ರಿಮಂಡಲ. ಇದು ನನ್ನ ಮಾತಲ್ಲ. ಇದು ಮಾನ್ಯ ಮುಖ್ಯಮಂತ್ರಿಗಳ ಮಾತು. ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳಿದ್ದಾರೆ. ಈ ಮಂತ್ರಿಮಂಡಲ ರಾಜ್ಯದ ಎಲ್ಲಾ ಜವಾಬ್ದಾರಿಯನ್ನು ಹೊರುವುದಕ್ಕೆ ಸಮರ್ಥವಾಗಿಲ್ಲ. ಇದನ್ನು ಸಾಧ್ಯವಾದಷ್ಟು ಬೇಗ ವಿಸ್ತರಣೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಆ ಪಟ್ಟಿಯಲ್ಲಿ ನೀವು ಇದ್ದೀರೋ ಇಲ್ಲವೋ ನನಗಂತೂ ಗೊತ್ತಿಲ್ಲ. ಆ ರೀತಿ ಪಟ್ಟಿಯಲ್ಲಿದ್ದರೆ ನಿಮ್ಮ ಪರವಾಗಿ ಮತ್ತೊಮ್ಮೆ ರೆಕಮೆಂಡ್ ಮಾಡುತ್ತೇನೆ, ಸಾಧ್ಯವಾದಷ್ಟು ಬೇಗ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ಬೂಟಾಸಿಂಗ್‌ಗೆ ಸೀಟ್ ಸಿಕ್ಕಿದ್ದರೆ ಪಜೀತಿ ಬೇರೇನೆ ಆಗುತ್ತಿತ್ತು. ಅವರಲ್ಲಿ ಎರಡು–ಮೂರು ಗುಂಪಾದರೂ ಆಗುತ್ತಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ರಾಂ ಜೇಠ್ಮಾಲಿಯನ್ನು ತಂದಾಗ ಎರಡು–ಮೂರು ಗುಂಪು ಆಗಿತ್ತೇ ?

ಶ್ರೀ ವಾಟಾಳ್ ನಾಗರಾಜ್.—ಜೇಠ್ಮಾಲಿಯನ್ನು ತಂದು ಹೆಗಡೆ ಅವರ ಪರಿಸ್ಥಿತಿ ಇಲ್ಲಿ ಬಂತು. ನೀವು ಬೂಟಾರವರನ್ನು ತಂದಿದ್ದರೆ ಅವರ ಪರಿಸ್ಥಿತಿ ಇದೇ ರೀತಿ ಆಗುತ್ತಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಗುರುತ್ವಾದಸ್ವಾಮಿಯನ್ನು ಕಳುಹಿಸಿದರೆ, ನೀವು ಹೇಳುವ ಪರಿಸ್ಥಿತಿಯೇನಾದರೂ ಆಗುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್.—ನೀವು ಮೂರು–ನಾಲ್ಕು ಗುಂಪಿನವರಂ ಎಷ್ಟು ಬೇಗ ಸರ್ಕಾರದ ಕಾಲನ್ನು ಎಳೆಯಬೇಕು ಎಂದು, ತವಕದಲ್ಲಿ ಕಾದಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ —ಈ ಅಪೂರ್ಣವಾದಂಥ ಮಂತ್ರಿಮಂಡಲ ಇಡೀ ರಾಜ್ಯದ ನಾಲ್ಕು ಕೋಟಿ ಕನ್ನಡಿಗರಿಗೆ ಸಮರ್ಥವಾದಂಥ ಜನರ ಅಪೇಕ್ಷೆಯನ್ನು ಒಳಗೊಂಡಂಥ ಮತ್ತು ಯಾವ ಜನ ಇವರಿಗೆ ಮತದಾನ ಕೊಟ್ಟರೋ ಆ ಮತದಾರರ ಅಭೀಪ್ಸೆಯನ್ನು ನೆರವೇರಿಸತಕ್ಕಂಥ ಪೂರ್ಣವಾದಂಥ ಒಂದು ಆಯವ್ಯಯವನ್ನು ಮಂಡನೆ ಮಾಡಲಿಲ್ಲ ಎಂದು ನನ್ನ ಅನ್ನಿಸಿಕೆ. ಈ ಮಾತನ್ನು ಹೇಳುವಾಗ ಇದಕ್ಕೆ ಬೇಕಾದಂಥ ಸಾಕ್ಷಿ ಪುರಾವೆಗಳನ್ನು ಒದಗಿಸುವುದು ಕೂಡಾ ನನ್ನ ಕರ್ತವ್ಯವಾಗುತ್ತದೆ. ಆ ದೃಷ್ಟಿಯಿಂದ ಆಯವ್ಯಯದ ಮೇಲೆ ಸ್ವಲ್ಪಮಟ್ಟಿಗೆ ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಮಾಡುತ್ತೇನೆ. ರಾಜ್ಯಪಾಲರ ಮೊದಲ ಭಾಷಣದಲ್ಲಿ ಆಗಲೀ ಅಥವಾ ಎರಡನೇ ಭಾಷಣದಲ್ಲಿ ಆಗಲೀ ರಾಜ್ಯ ಬಯಸಿದಂಥ ಒಂದು ನೀತಿ ನಿರೂಪಣೆಯನ್ನು ಅದರಲ್ಲಿ ಮಾಡಲಿಲ್ಲ ಎನ್ನತಕ್ಕಂಥ ಆರೋಪವನ್ನು ನಾನು ಇಲ್ಲಿ